ಒಂದು ನರಪಿಳ್ಳೆಯೂ ಗೋಚರಿಸಲಿಲ್ಲ. ಧ್ವನಿ ಬಂದ ದಿಕ್ಕಿನತ್ತ ತಲೆಯನ್ನು ಮತ್ತಷ್ಟು ಹೊರಳಿಸಿ ಕಿವಿಗೊಟ್ಟವನಿಗೆ ತಾನು ಕೇಳುತ್ತಿರುವ ಧ್ವನಿ ಆ ಕೋಣೆಯ ಬಾಗಿಲಿರುವ ಗೋಡೆಯಿಂದ ಬರುತ್ತಿದೆ ಎನ್ನುವುದೇ ನಂಬಲಸಾಧ್ಯವಾದ ಸಂಗತಿಯಾಗಿತ್ತು. ಆಶ್ಚರ್ಯದ ಸಂಗತಿಯೆಂದರೆ ಕೋಣೆಯ ನಾಲ್ಕೂ ಗೋಡೆಗಳು ನಿನ್ನೆ ರಾತ್ರಿಯಿಂದ ಇಂದು ಬೆಳಗ್ಗಿನವರೆಗೆ ಆ ಕೋಣೆಯಲ್ಲಿ ನಡೆದ ಪ್ರತಿಯೊಂದು ಘಟನೆಯನ್ನು ಕುರಿತು ಪರಸ್ಪರ ಸಂಭಾಷಣೆಯಲ್ಲಿ ನಿರತವಾಗಿದ್ದವು. 'ಹೊಸ ಜೋಡಿ ಇರಬೇಕು ಅವರಿಬ್ಬರೂ ಎಷ್ಟೊಂದು ಅನ್ಯೋನ್ಯವಾಗಿದ್ದರು ನೋಡಿ' ಎಂದು ಒಂದು ಗೋಡೆ ಹೇಳಿದರೆ ಆ ಮಾತಿಗೆ ಪ್ರತಿಕ್ರಿಯೆಯಾಗಿ ಇನ್ನೊಂದು ಗೋಡೆ, 'ಅವರು ಮದುವೆಯಾದವರಂತೆ ಕಾಣಿಸ್ತಿರಲಿಲ್ಲ. ರಾತ್ರಿ ಒಂದಾಗಿ ಕಳೀಬೇಕು ಅಂತ ಇಲ್ಲಿಗೆ ಬಂದ ಪ್ರೇಮಿಗಳಾಗಿರಬೇಕು' ಎಂದಿತು. 'ಇಲ್ಲ ಇಲ್ಲ ಅವಳು ವೇಶ್ಯೆಯಾಗಿರಬೇಕು. ಅವನು ಗಿರಾಕಿಯಾಗಿದ್ದು ಇಲ್ಲಿಗೆ ಕರೆದುಕೊಂಡು ಬಂದಿದ್ದ ಅನಿಸುತ್ತೆ' ನುಡಿಯಿತು ಮೂರನೇ ಗೋಡೆ. ಆ ಮೂರು ಗೋಡೆಗಳ ಮಾತು ಕೇಳಿ ಕಿಲಕಿಲ ಎಂದು ನಕ್ಕಿತು ನಾಲ್ಕನೇ ಗೋಡೆ. 'ಏ ಯಾಕೆ ನಗ್ತಿದ್ದಿ. ನಿನ್ನ ಅಭಿಪ್ರಾಯ ಹೇಳಬೇಕು ಅನಿಸಿದರೆ ಹೇಳು' ಎಂದಿತು ಒಂದನೇ ಗೋಡೆ ಸಿಟ್ಟಿನಿಂದ. 'ನನ್ನದೇನೂ ಅಭಿಪ್ರಾಯ ಇಲ್ಲ. ರಾತ್ರಿ ಮಂಚ ಸೇರಿದ ತಕ್ಷಣ ಲೈಟ್ ಆರಿಸಿದರಲ್ಲ, ಅಯ್ಯೋ ಈ ಹಾಳಾದ ಕತ್ತಲಿನಿಂದಾಗಿ ಎಂಥಾ ಚಾನ್ಸ್ ಮಿಸ್ಸಾಯಿತು' ಲೊಚಗುಟ್ಟಿತು ನಾಲ್ಕನೇ ಗೋಡೆ. ಆ ಮಾತು ಕೇಳಿದ್ದೆ ಮಂಚದ ಮೇಲೆ ಮಲಗಿದ್ದ ಗಂಗಾಧರನ ಮೈ ಬಿಸಿಯಾಯಿತು. 'ಏ ಬಾಯ್ಮುಚ್ಚು. ಮಂಚದ ಮೇಲೆ ಒಬ್ಬಾತ ಈಗ ತಾನೇ ಬಂದು ಮಲಗಿದ್ದಾನೆ. ನಮ್ಮ ಮಾತು ಕೇಳಿಸಿಕೊಳ್ತಿರಬಹುದು' ಎಂದು ಬುದ್ಧಿಮಾತು ಹೇಳಿತು ಒಂದನೇ ಗೋಡೆ. 'ಇಲ್ಲ ಇಲ್ಲ ಮನುಷ್ಯರಿಗೆ ನಮ್ಮಂಥವರ ಮಾತುಗಳನ್ನು ಕೇಳಿಸಿಕೊಳ್ಳುವ ವಿದ್ಯೆ ಇನ್ನೂ ಪ್ರಾಪ್ತವಾಗಿಲ್ಲ. ಹಾಗೇನಾದರೂ ಆಗಿದಿದ್ದರೆ ಈ ಸ್ನಾನದ ಮನೆಯಲ್ಲಿ ನನ್ನೆದುರು ಮೈಮೇಲೆ ಒಂದೂ ಬಟ್ಟೆ ಇಲ್ಲದಂತೆ ಸ್ನಾನ ಮಾಡುತ್ತಿದ್ದರೇನು. ಈ ಕೋಣೆ ಕಟ್ಟಿದಾಗಿನಿಂದ ಅದೆಷ್ಟು ಬೆತ್ತಲೆ ದೇಹಗಳನ್ನು ನಾನು ನೋಡಿದ್ದೀನಿ, ಲೆಕ್ಕಕ್ಕೆ ಇಲ್ಲ' ಅದುವರೆಗೂ ಸುಮ್ಮನಿದ್ದ ಬಾತ್‌ರೂಮಿನ ಗೋಡೆ ಬಾಯ್ಬಿಟ್ಟಿತು. ಈ ಮಾತು ಕೇಳಿ ಗಂಗಾಧರನ ದೇಹ ಮತ್ತಷ್ಟು ಬೆಚ್ಚಗಾಯಿತು. ಕುತೂಹಲ ಹೆಚ್ಚಾಗಿ ಕಿವಿಗಳನ್ನು ಗೋಡೆಗಳತ್ತಲೇ ನೆಟ್ಟು ಮಲಗಿದವನಿಗೆ ಈಗ ಯಾವ ಮಾತುಗಳೂ ಕೇಳಿಸದಾಯಿತು. ಗೋಡೆಗಳು ಮಾತು ನಿಲ್ಲಿಸಿ ಮೌನಕ್ಕೆ ಶರಣಾಗಿದ್ದವು. ಅರೆಘಳಿಗೆ ವಿಶ್ರಾಂತಿಗೆಂದು ಬಂದವನಿಗೆ ನಿದ್ದೆ ದೂರಾಗಿತ್ತು. ಗೋಡೆಗಳು ಮತ್ತೆ ಸಂಭಾಷಣೆ ಶುರು ಮಾಡಬಹುದೆಂದು ಒಂದಷ್ಟು ಹೊತ್ತು ಕಾದವನಿಗೆ ಅವುಗಳ ಮಾತುಗಳು ಕೇಳಿಸದೆ ನಿರಾಸೆಯಾಯಿತು. ಲಾಡ್ಜ್ ಮಾಲೀಕರು ಬರುವ ಹೊತ್ತಾದ್ದರಿಂದ ಗಂಗಾಧರ ಎದ್ದು ಕೋಣೆಯಿಂದ ಹೊರಬಂದು ರಿಸೆಪ್ಷನ್ ಕೌಂಟರಿನತ್ತ ಬೇಸರದಿಂದಲೇ ಹೆಜ್ಜೆ ಹಾಕಿದ.

***

ಗಂಗಾಧರ ಜೋಶಿ ಕಲಬುರಗಿ ತಾಲೂಕಿನ ಸಣ್ಣ ಹಳ್ಳಿಯವನು. ಊರಲ್ಲಿ ಅಪ್ಪ ರಂಗಾಚಾರ್ಯ ಜೋಶಿ ವೈದಿಕ ಮಾಡಿಕೊಂಡು ಅಷ್ಟಿಷ್ಟು ಸಂಪಾದಿಸುತ್ತ ಐದು ಮಕ್ಕಳ ಸಂಸಾರವನ್ನು ತೂಗಿಸುವುದರಲ್ಲೇ ಹೈರಾಣಗಿದ್ದರು. ಊರಿನ ಸರ್ಕಾರಿ ಶಾಲೆಯಲ್ಲಿ ಹತ್ತನೇ ತರಗತಿವರೆಗೆ ಓದಿದ ಗಂಗಾಧರ ಮುಂದೆ ವಿದ್ಯೆ ತಲೆಗೆ ಹತ್ತದೆ ಓದಿಗೆ ತಿಲಾಂಜಲಿಯಿತ್ತು ಅಪ್ಪನೊಂದಿಗೆ ವೈದಿಕದ ಕೆಲಸದಲ್ಲಿ ಕೈಜೋಡಿಸಿದ್ದ. ರಂಗಾಚಾರ್ಯರು ಸಾಲಾಗಿ ನಾಲ್ಕು ಹೆಣ್ಣುಮಕ್ಕಳ ನಂತರ ಹುಟ್ಟಿದ ಮನೆತನದ ಏಕೈಕ ವಾರಸುದಾರನೆಂದು ಗಂಗಾಧರನ ಮೇಲೆ ಹೆಚ್ಚಿನ ಆಸೆ, ಭರವಸೆಗಳನ್ನು ಇಟ್ಟುಕೊಂಡಿದ್ದರು. ಮಗ ಓದಿ ವಿದ್ಯಾವಂತನಾಗಿ ದೊಡ್ಡ ಹುದ್ದೆಗೆ ಸೇರಿ ನಾಲ್ವರು ಪುತ್ರಿಯರ ಕನ್ಯಾಸೆರೆಯಿಂದ ತಮ್ಮನ್ನು ಮುಕ್ತಿಗೊಳಿಸುವನೆಂದು ಅಖಂಡ ವಿಶ್ವಾಸದಿಂದಿದ್ದ ರಂಗಾಚಾರ್ಯರಿಗೆ ಮಗ ಓದು ಅರ್ಧಕ್ಕೆ ನಿಲ್ಲಿಸಿದ್ದು ನಿರಾಸೆಗೆ ಕಾರಣವಾಗಿತ್ತು. ಗಂಗಾಧರ ಕಷ್ಟಪಟ್ಟು ನಾಲ್ಕೈದು ಸಲ ಪರೀಕ್ಷೆ ಬರೆದು ಹತ್ತನೇ ತರಗತಿ ಪಾಸಾಗಿ ಮುಂದೆ ಓದುವುದಿಲ್ಲ ಎಂದಾಗ ಆರಂಭದಲ್ಲಿ ನಿರಾಸೆಯಾದರೂ ತಮ್ಮ ಮನೆತನದಲ್ಲಿ ಯಾರಿಗೂ ಹೆಚ್ಚು ವಿದ್ಯೆ ತಲೆಗೆ ಹತ್ತಿಲ್ಲ ಎನ್ನುವ ಸಮಾಧಾನ ಮನಸ್ಸಿಗೆ ತಂದುಕೊಂಡು ತಮ್ಮ ದಿನ ನಿತ್ಯದ ಪೌರೋಹಿತ್ಯದ ಕಾಯಕದಲ್ಲಿ ಮಗನನ್ನು ಜೊತೆಯಾಗಿಸಿಕೊಂಡಿದ್ದರು.